Karnataka Board

# SAMPLE PAPER

aglasem.com

2023

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಕೆಎಸ್‌ಕ್ಯುಎಎಸಿ, ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SCHOOL EXAMINATION AND ASSESSMENT BOARD

KSQAAC, Malleshwaram, Bengaluru–560003.

## ಮೌಲ್ಯಾಂಕನ – ಮಾರ್ಚ್ 2023 – ಮಾದರಿ ಪ್ರಶ್ನೋತ್ತರ ಪತ್ರಿಕೆ

## Assessment - March 2023 Model Paper

**ತರಗತಿ : 8** ವಿಷಯ : ಪ್ರಥಮ ಭಾಷೆ ಕನ್ನಡ ಅಂಕಗಳು : 40
ಸಮಯ : 2 ಗಂಟೆ

ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ

ವಿದ್ಯಾರ್ಥಿಯ ಹೆಸರು : ____________________

ವಿದ್ಯಾರ್ಥಿಯ SATS ಸಂಖ್ಯೆ : | | | | | | | | | | ವಿದ್ಯಾರ್ಥಿಯ ಸಹಿ : ____________

ಕೊಠಡಿ ಮೇಲ್ವಿಚಾರಕರು ಭರ್ತಿ ಮಾಡಬೇಕಾಗಿರುವ ಮಾಹಿತಿ

ಶಾಲೆಯ ಡೈಸ್ ಕೋಡ್ : | | | | | | | | | | | |

ಶಾಲೆಯ ಹೆಸರು : ____________________

ಕ್ಲಸ್ಟರ್ : ____________ ಬ್ಲಾಕ್ : ____________ ಜಿಲ್ಲೆ : ____________

ಶಾಲೆಯ ವಿಧ : ಸರ್ಕಾರಿ ☐ ಅನುದಾನಿತ ☐ ಅನುದಾನ ರಹಿತ ☐

(ಅನ್ವಯಿಸುವ ಮಾಹಿತಿಗೆ "✓" ಗುರುತು ಹಾಕಿರಿ)

ಕೊಠಡಿ ಮೇಲ್ವಿಚಾರಕರ ಸಹಿ : ____________

ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ

| ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು |
|---|---|---|---|---|---|
| 1 | | 11 | | 21 | |
| 2 | | 12 | | 22 | |
| 3 | | 13 | | 23 | |
| 4 | | 14 | | 24 | |
| 5 | | 15 | | 25 | |
| 6 | | 16 | | 26 | |
| 7 | | 17 | | 27 | |
| 8 | | 18 | | 28 | |
| **9** | | 19 | | – | |
| **10** | | 20 | | – | |
| ಒಟ್ಟು ಅಂಕಗಳು | | ಒಟ್ಟು ಅಂಕಗಳು | | ಒಟ್ಟು ಅಂಕಗಳು | |
| | | | | ಒಟ್ಟು ಗಳಿಸಿದ ಅಂಕ | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) ____________________

ಮೌಲ್ಯಮಾಪಕರ ಸಹಿ : ____________

**I.** **1 ರಿಂದ 20 ರವರೆಗಿನ ಪ್ರಶ್ನೆಗಳಿಗೆ ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ನಿಗದಿಪಡಿಸಿರುವ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.** **(20 x 1 = 20)**

**1.** **ಒಂದು ಊರಿನಲ್ಲಿ ಒಬ್ಬಳು ಮುದುಕಿಯಿದ್ದಳು – ಈ ವಾಕ್ಯದಲ್ಲಿ 'ಊರು' ಎಂಬುದು,**

A. ರೂಢನಾಮ
B. ಅಂಕಿತನಾಮ
C. ಅನ್ವರ್ಥನಾಮ
D. ಸರ್ವನಾಮ

ಉತ್ತರ : ________

**2.** **ಬಾಲಕನು ತಂದೆಯನು ಕರೆತರುವೆನೆಂದನು – ಈ ವಾಕ್ಯದ ಲಿಂಗರೂಪ,**

A. ಸ್ತ್ರೀಲಿಂಗ
B. ಪುಲ್ಲಿಂಗ
C. ನಪುಂಸಕ ಲಿಂಗ
D. ಸ್ತ್ರೀನಪುಂಸಕ ಲಿಂಗ

ಉತ್ತರ : ________

**3.** **ಅವರು ಶಾಲೆಗೆ ಹೋದರು – ಈ ವಾಕ್ಯದ ಏಕವಚನ ರೂಪ,**

A. ನೀವು ಶಾಲೆಗೆ ಹೋದಿರಿ.
B. ಅವು ಶಾಲೆಗೆ ಹೋದವು
C. ನಾವು ಶಾಲೆಗೆ ಹೋದೆವು
D. ಅವನು ಶಾಲೆಗೆ ಹೋದನು

ಉತ್ತರ : ________

**4.** **ಬಭ್ರುವಾಹನನು ಕುದುರೆಯನ್ನು ಕಟ್ಟಿ ಹಾಕಿದ್ದರಿಂದ ಅವನಿಗೂ ಅರ್ಜುನನಿಗೂ ಯುದ್ಧ ನಡೆಯಿತು – ಇದು ವಾಕ್ಯದ ಈ ಪ್ರಕಾರ,**

A. ಸಾಮಾನ್ಯ ವಾಕ್ಯ
B. ಸಂಯೋಜಿತ ವಾಕ್ಯ
C. ಮಿಶ್ರವಾಕ್ಯ
D. ಪ್ರಶ್ನಾರ್ಥಕ ವಾಕ್ಯಉತ್ತರ

________

**5.** **ವಿದ್ಯಾರ್ಥಿಯು ಶಾಲೆಯಲ್ಲಿ ಹಗಲುಗನಸು ಕಾಣಬಾರದು, ಈ ವಾಕ್ಯದಲ್ಲಿನ ಹಗಲುಗನಸು ಪದವು,**

A. ದ್ವಿಗು ಸಮಾಸ
B. ತತ್ಪುರುಷ ಸಮಾಸ
C. ದ್ವಂದ್ವ ಸಮಾಸ
D. ಗಮಕ ಸಮಾಸ

ಉತ್ತರ : ________

aglasem

6. ಮಕ್ಕಳು ದೀಪಾವಳಿಗೆ ಅಂಗಡಿಯಿಂದ ಪಟಾಕಿಯನ್ನು ತರುತ್ತಾರೆ. – ಈ ವಾಕ್ಯದಲ್ಲಿ ಚತುರ್ಥೀ ವಿಭಕ್ತಿ ಪ್ರತ್ಯಯ ಹೊಂದಿರುವ ಪದ :

A. ದೀಪಾವಳಿಗೆ B. ಪಟಾಕಿಯನ್ನು

C. ಅಂಗಡಿಯಿಂದ D. ಮಕ್ಕಳು

ಉತ್ತರ : ______

7. ಕಬ್ಬಿಗನು ಕಾವ್ಯವನ್ನು ವಿನೋದಕ್ಕಾಗಿ ವಿಸ್ತಾರವಾಗಿ ರಚಿಸಿದನು – ಈ ವಾಕ್ಯದಲ್ಲಿರುವ ತದ್ಭವ ರೂಪದ ಪದ :

A. ಕಬ್ಬಿಗ B. ಕಾವ್ಯ

C. ವಿನೋದ D. ವಿಸ್ತಾರ

ಉತ್ತರ : ______

8. ಆಚಾರಕ್ಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು ನನಕಂದ
ಜ್ಯೋತಿಯೇ ಆಗು ಜಗಕ್ಕೆಲ್ಲ.

– ಈ ಪದ್ಯದ ಸಾಹಿತ್ಯ ಪ್ರಕಾರ :

A. ದ್ವಿಪದಿ B. ಚೌಪದಿ

C. ತ್ರಿಪದಿ D. ಷಟ್ಪದಿ

ಉತ್ತರ : ______

9. "ಹುಲಿಯೊಂದನ್ನು ಗಾಡಿಯವನೊಬ್ಬ ನೋಡ್ತಾನೆ" – ಈ ವಾಕ್ಯದಲ್ಲಿ 'ನೋಡ್ತಾನೆ' ಎಂಬ ಪದದ ಗ್ರಾಂಥಿಕ ರೂಪ :

A. ನೋಡುತ್ತಾನೆ B. ನೋಡುತ್ತೇನೆ

C. ನೋಡಿದನು D. ನೋಡಿದೆನೆ

ಉತ್ತರ : ______

10. "ಕಾಯಕವೇ ಕೈಲಾಸ" – ಈ ವಾಕ್ಯದಲ್ಲಿ 'ಕಾಯಕ' ಎಂಬ ಪದದ ಅರ್ಥ :

A. ದೇಹ B. ಗುರು

C. ಕಾಗೆ D. ಕೆಲಸ

ಉತ್ತರ : ______

11. ಕಾರ್ಯಕ್ರಮ ನಿರೂಪಣಾ ಹಂತಗಳ ಅನುಕ್ರಮ ರೂಪ :

A. ವಂದನಾರ್ಪಣೆ, ಪ್ರಾರ್ಥನೆ, ಭಾಷಣ, ಸ್ವಾಗತ
B. ಸ್ವಾಗತ, ವಂದನಾರ್ಪಣೆ, ಪ್ರಾರ್ಥನೆ ಭಾಷಣ
C. ಪ್ರಾರ್ಥನೆ, ಸ್ವಾಗತ, ಭಾಷಣ, ವಂದನಾರ್ಪಣೆ
D. ಭಾಷಣ, ಸ್ವಾಗತ ಪ್ರಾರ್ಥನೆ, ವಂದನಾರ್ಪಣೆ

ಉತ್ತರ : ______

12. ಈ ಕೆಳಗಿನ ಗದ್ಯಭಾಗವನ್ನು ಓದಿ ಮೌಲ್ಯವನ್ನು ಗುರ್ತಿಸಿ :

ದೇವರು ಎಲ್ಲೆಡೆ ಸಿಗಲಾರದ ಕಾರಣ ತಾಯಿಯನ್ನು ಸೃಷ್ಟಿಸಿದ. ಪ್ರತಿ ಮಕ್ಕಳು ಅಮ್ಮನ ಬೆಚ್ಚನೆಯ ಮಡಿಲಲ್ಲಿ ವಾತ್ಸಲ್ಯವನ್ನು ಅನುಭವಿಸಿದವರೆ, ನಾವು ಎಷ್ಟೇ ದೊಡ್ಡವರಾಗಿ ಸ್ವತಂತ್ರ ಬದುಕು ಕಟ್ಟಿಕೊಂಡರೂ ಅಮ್ಮನ ಕೈತುತ್ತು, ತೋರಿದ ಪ್ರೀತಿ, ಕಲಿಸಿದ ಪಾಠ, ಹಾಕಿಕೊಟ್ಟ ಹಾದಿ ಎಲ್ಲವೂ ನಮಗೆ ದಾರಿದೀಪ. ಹೀಗಾಗಿ ವಯಸ್ಸಾದ ತಂದೆ–ತಾಯಿಗಳನ್ನು ಪ್ರೀತಿಯಿಂದ ನೋಡಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯ ಎಂಬುದನ್ನು ಮರೆಯಬಾರದು.

A. ತಂದೆ–ತಾಯಿಯರಿಗೆ ದಾರಿ ದೀಪ
B. ಮಕ್ಕಳ ಮೇಲಿನ ಕಾಳಜಿ
C. ತಂದೆ ತಾಯಿಗಳಿಗೆ ಅಗೌರವ
D. ತಂದೆ–ತಾಯಿಗಳ ಮೇಲಿನ ಗೌರವ

ಉತ್ತರ : ______

13. ಈ ಕೆಳಗಿನ ನಾಟಕ ಭಾಗವನ್ನು ಓದಿ ಉತ್ತರವನ್ನು ಗುರ್ತಿಸಿ :

ತಾತ : ದೀಪ ಏಕೆ ಹಚ್ಚುತ್ತಾರೆ? ವಿಚಾರ ಮಾಡಿ ಯಾರಾದರು ಹೇಳುವಿರಾ?
ಗೋಪಿ : ದೀಪ ಎಂದರೆ ಬೆಳಕು ಅದು ಜ್ಞಾನದ ಸಂಕೇತ.
ತಾತ : ಚೆನ್ನಾಗಿ ತಿಳಿದುಕೊಂಡಿರುವೆ, ನಿಮ್ಮ ಮನೆಯಲ್ಲಿ ಯಾವಯಾವ ಹಬ್ಬಗಳನ್ನು ಆಚರಿಸುತ್ತಾರೆ?
ಗೋಪಿ : ದಸರಾ, ದೀಪಾವಳಿ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ.

ಇಲ್ಲಿ ದೀಪದ ಸಂಕೇತ,

A. ಹಬ್ಬ
B. ದಸರಾ
C. ಜ್ಞಾನ
D. ಬಣ್ಣ

ಉತ್ತರ : ______

14. ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದಾಗ ಗುರುಗಳು ಬೆನ್ನು ತಟ್ಟಿದರು. – ಈ ವಾಕ್ಯದಲ್ಲಿ 'ಬೆನ್ನು ತಟ್ಟು' ಎಂಬ ನುಡಿಗಟ್ಟಿನ ಅರ್ಥ :

A. ದ್ವೇಷ ಸಾಧಿಸು
B. ಪ್ರೋತ್ಸಾಹಿಸು
C. ಸಮಯಸಾಧಿಸು
D. ಮೋಸಮಾಡು

ಉತ್ತರ : ______

15. ಎನ್ನೊಳಂತಿದು ಪಾಸುವೊಕ್ಕು – ಈ ಸಾಲಿನ ಹೊಸಗನ್ನಡ ರೂಪ,

A. ನನ್ನಲ್ಲಿ ಇದು ಹಾಸಿಗೆಯಾಗಿದೆ
B. ನನ್ನಲ್ಲಿ ಹಾಗೆ ಇದು ಹಾಸುಹೊಕ್ಕಾಗಿದೆ.
C. ನನ್ನಲ್ಲಿ ಇದು ಹಸನಾಗಿದೆ.
D. ನನ್ನಲ್ಲಿ ಅದು ಹಳಸಿದೆ

ಉತ್ತರ : ☐ ____________________

16. ಆಟೋರಿಕ್ಷಾ ಹತ್ತುವುದಕ್ಕಿಂತ ಮುಂಚೆ "ಸ್ವಲ್ಪ ನಿಧಾನವಾಗಿ ಓಡಿಸಪ್ಪ, ಇನ್ನೂ 50 ಪೈಸೆ, ಜಾಸ್ತಿ ಕೊಡುತ್ತೇನೆ. ನನಗೆ ವಯಸ್ಸಾಗಿದೆ. ಎತ್ತಿ ಹಾಕುವುದನ್ನು ತಡೆದುಕೊಳ್ಳಲು ಆಗುವುದಿಲ್ಲ" ಅಂತ ಒಮ್ಮೆ ಅಂದೆ. "ರೀ ಸ್ವಾಮಿ ಸುಮ್ಮನೆ ಕುಳಿತುಕೊಳ್ಳಿ ನಿಮ್ಮಂತವರಿಂದಲೇ ಆಕ್ಸಿಡೆಂಟ್ ಆಗುವುದು ಹತ್ತುವುದಕ್ಕಿಂತ ಮುಂಚೆನೆ ಅಪಶಕುನ. ಎಂದು ಸಿಡುಕಾಡಿ ಸ್ಟಾರ್ಟ್ ಮಾಡಿದ.

ಈ ಲೇಖನ ಭಾಗದ ಸಾಹಿತ್ಯದ ಪ್ರಕಾರ,

A. ಜೀವನ ಚರಿತ್ರೆ
B. ಆತ್ಮಚರಿತ್ರೆ
C. ನಾಟಕ
D. ಕಥನ ಕವನ

ಉತ್ತರ : ☐ ____________________

17. 'ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಸ್ನೇಹಗಳ ಗುರುತಿಸಿದಾದೆವು ನಮ್ಮೊಳಗೆ'

ಈ ಪದ್ಯಭಾಗದ ಆಶಯ

A. ಕಲ್ಲಿನ ಮಹತ್ವ
B. ಪ್ರೀತಿ–ಸ್ನೇಹಗಳ ಮಹತ್ವ
C. ದೇವರ ಮಹತ್ವ
D. ಮಣ್ಣಿನ ಮಹತ್ವ

ಉತ್ತರ : ☐ ____________________

18. ಆಶ್ರಮದ ಮುನಿಯು ಶಿಷ್ಯರನ್ನು ನೋಡಿ ಮುನಿಸಿಕೊಂಡನು. – ಈ ವಾಕ್ಯದಲ್ಲಿನ 'ಮುನಿ' ಎಂಬ ಪದದ ನಾನಾರ್ಥಕ ಪದಗಳು :

A. ಋಷಿ – ಕೋಪ
B. ಋಷಿ – ಒಪ್ಪಿಗೆ
C. ಕೋಪ – ಮನೆ
D. ಕೋಪ – ಆಶ್ರಮ

ಉತ್ತರ : ☐ ____________________

aglasem

**19. ಈ ಚಿತ್ರದ ಸೂಕ್ತವಾದ ಸಂದೇಶ :**



A. ರಸ್ತೆಗಳಲ್ಲಿ ಒಕ್ಕಲು ಮಾಡಬಾರದು

B. ರಸ್ತೆಯಲ್ಲಿ ಒಕ್ಕಲು ಮಾಡಬೇಕು

C. ರಸ್ತೆಯಲ್ಲಿ ವಾಹನವನ್ನು ಓಡಿಸಬಾರದು

D. ರಸ್ತೆಯಲ್ಲಿ ಒಕ್ಕಲು ಮಾಡಿ ಗಾಡಿ ಓಡಿಸುವುದು

ಉತ್ತರ : ______

**20. ಶುದ್ಧರೂಪದ ವಾಕ್ಯವನ್ನು ಗುರುತಿಸಿ,**

A. ಅರಮನೆಯಲ್ಲಿ ವಿಶೇಸ ಪದಾರ್ಥಗಳನ್ನು ಇಡಲಾಗಿತ್ತು

B. ಅರಮನೆಯಲ್ಲಿ ವಿಷೇಶ ಪದಾರ್ಥಗಳನ್ನು ಇಡಲಾಗಿತ್ತು.

C. ಅರಮನೆಯಲ್ಲಿ ವಿಶೇಷ ಪಧಾರ್ಥಗಳನ್ನು ಇಡಲಾಗಿತ್ತು.

D. ಅರಮನೆಯಲ್ಲಿ ವಿಶೇಷ ಪದಾರ್ಥಗಳನ್ನು ಇಡಲಾಗಿತ್ತು.

ಉತ್ತರ : ______

## II. 21 ರಿಂದ 28 ರವರೆಗಿನ ಪ್ರಶ್ನೆಗಳಿಗೆ ನಿಗದಿಪಡಿಸಿರುವ ಸ್ಥಳದಲ್ಲಿ ಉತ್ತರಿಸುವುದು.

**21. ಕಾಗೆಯಮರಿ ಕೋಗಿಲೆಯಾಗಬಲ್ಲುದೆ?**
**ಆಡಿನಮರಿ ಆನೆಯಾಗಬಲ್ಲದೆ ?**
**ಸೀಳು ನಾಯಿ ಸಿಂಹದ ಮರಿಯಾಗಬಲ್ಲುದೆ?**
**ಅರಿವು ಆಚಾರ ಸಮ್ಯಜ್ಞಾನವನರಿಯದೆ**
**ನಾಮವ ಹೊತ್ತುಕೊಂಡು ತಿರುಗುವ ಗಾವಿಲರ**
**ಮುಖವ ನೋಡಲಾಗದು ಆಮುಗೇಶ್ವರಾ.**

**ವಚನದಲ್ಲಿ ಗಾವಿಲರನ್ನು ಯಾವ ನಿದರ್ಶನಗಳ ಮೂಲಕ ಅರ್ಥೈಸಲಾಗಿದೆ?** **2 ಅಂಕ**

______

______

______

______

aglasem

22. ಶ್ರುತಿಮಾರ್ಗಂ ಬಿಡದಾತ ಸುವ್ರತಿ ಮಹಾ ಸದ್ವಿದ್ಯೆಯೇ ಪುಣ್ಯದಂ ।
ಸುತನೇ ಸದ್ಗತಿದಾತನೈ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥

ಈ ಮೇಲಿನ ಸಾಲುಗಳನ್ನಾಧರಿಸಿ ಸುವ್ರತಿ, ಸುತ, ವಿದ್ಯೆಯ ಲಕ್ಷಣಗಳನ್ನು ಬರೆಯಿರಿ. 2 ಅಂಕ

23. "ಮಾನವನ ಬದುಕಿನಲ್ಲಿ ಬಾಲ್ಯ ಕಟ್ಟಿಕೊಡುವ ನೆನಪು ಅಪಾರ ಹಾಗೂ ಅಮೋಘ, ಬಾಲ್ಯದ ಈ ನೆನಪಿನಂಗಳದಲ್ಲಿ ತುಂಬಿ ಬರುವ ಈ ನೆನಪಿನ ಬುತ್ತಿಯು ಬದುಕಿನುದ್ದಕ್ಕೂ ಮುಗಿಯದ ಅಕ್ಷಯಪಾತ್ರೆಯಾಗಿರುತ್ತದೆ" ಬಾಲ್ಯದ ನೆನಪುಗಳ ಬಗೆಗೆ ನಿಮ್ಮ ಅನಿಸಿಕೆಯನ್ನು ಬರೆಯಿರಿ. 2 ಅಂಕ

24. "ಅತಿಯಾಸೆ ಗತಿಗೆಡಿಸಿತು" – ಈ ಗಾದೆ ಮಾತನ್ನು ಅರ್ಥೈಸಿ ಬರೆಯಿರಿ. 2 ಅಂಕ

25. ನಿಮ್ಮ ಶಾಲೆಯಲ್ಲಿ ಆಚರಿಸಿದ ಗಾಂಧಿಜಯಂತಿಯನ್ನು ಕುರಿತು ಮೂರು ಸಾಲುಗಳನ್ನು ಬರೆಯಿರಿ. 2 ಅಂಕ



aglasem

26. ಈ ಕೆಳಗಿನ ಚಿತ್ರವನ್ನು ಗಮನಿಸಿ ನಿಮ್ಮ ಅನಿಸಿಕೆಗಳನ್ನು ಬರೆಯಿರಿ. 3 ಅಂಕ



27. ನಿಮ್ಮನ್ನು ವಿಜಯಪುರ ಜಿಲ್ಲೆಯ ಬಂಧನಾಳ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿ ಸುಮನ ಎಂದು ಭಾವಿಸಿಕೊಂಡು ನಿಮ್ಮ ಅಕ್ಕನ ಮದುವೆಗೆ ಹೋಗಲು ನಾಲ್ಕು ದಿನ ರಜೆ ಕೋರಿ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೊಂದು ಪತ್ರ ಬರೆಯಿರಿ. 3 ಅಂಕ

**28** ಈ ಕೆಳಗಿನ ಗದ್ಯಭಾಗವನ್ನು ಓದಿ, ಗ್ರಹಿಸಿಕೊಂಡು ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ : **4 ಅಂಕ**

"ಇಪ್ಪತನೆಯ ಶತಮಾನದ ಪೂರ್ವಾರ್ಧ ಕೋಲಾರ ತಾಲೂಕು ಜಮಾಬಂದಿ ಸಮಯ. ಅಧಿಕಾರಿಯ ಮುಂದೆ ತಪ್ಪಿತಸ್ಥ ರೈತನೊಬ್ಬ ನಿಂತಿದ್ದ ಆ ರೈತನಿಗೆ ಹೀಗೆ ಮಾಡಬಾರದು ಅಂತ ನಿನಗೆ ತಿಳಿದಿರಲಿಲ್ಲವಾ?" ಎಂದು ಹೇಳಿದರು. ಆಗ 'ಇಲ್ಲ ಬುದ್ದಿ' ಎಂದನು, "ರೈತ ಕಾನೂನು ತಿಳಿಯದೇ ತಪ್ಪು ಮಾಡಿದರೂ ಅಪರಾಧವೇ, ರೂಲ್ಸ್ ಯಾಕೆ ತಿಳಿದುಕೊಳ್ಳಲಿಲ್ಲ?' ಎಂದು ಅಧಿಕಾರಿಯು ರೈತನನ್ನು ಪ್ರಶ್ನಿಸಿದನು. ಅದಕ್ಕೆ ರೈತ "ನಿಮ್ಮ ರೂಲ್ಸು ಎಲ್ಲಾ ಇಂಗ್ಲೀಷಿನಲ್ಲಿದೆ ಸ್ವಾಮಿ, ನಾವೇನು ತಿಳ್ಕೊಳ್ಳೋದು?" ಎಂದನು. ರೈತನ ಇದೊಂದು ಪ್ರಶ್ನೆಯು ಅಧಿಕಾರಿಯ ಮೇಲೆ ಪ್ರಚಂಡ ಪರಿಣಾಮವನ್ನು ಬೀರಿತು. ಗ್ರಾಮಗಳ ಜನರ ಬೆವರಿನಿಂದ ಪಡೆದ ತೆರಿಗೆ ಹಣದಲ್ಲಿ ಸರ್ಕಾರ ನಡೆಸುವ ನಾವು ಅವರಿಗೆ ಅರ್ಥವಾಗುವ ಭಾಷೆಯಲ್ಲಿ ಸರಳ ಕಾಯಿದೆಯನ್ನು ತಿಳಿಯಲು ಬೇರೆಯವರನ್ನು ಅವಲಂಬಿಸಬೇಕಲ್ಲ" ಎಂದು ಆಲೋಚಿಸಿ ಆ ದಿನದಿಂದಲೆ ಆಡಳಿತದಲ್ಲಿ ಕನ್ನಡವನ್ನು ತರಲು ಪ್ರಯತ್ನಿಸಿದರು.

ಪ್ರಶ್ನೆಗಳು :

**1.** ರೈತ ಕಾನೂನು ಪಾಲಿಸಲು ತೊಡಕಾಗಿದ್ದು ಏಕೆ ಯೋಚಿಸಿ, ಉತ್ತರಿಸಿ.

______________________________

______________________________

______________________________

______________________________

**2.** ಕರ್ನಾಟಕದಲ್ಲಿ ಆಡಳಿತ ಭಾಷೆ ಕನ್ನಡವೇ ಆಗಿರಬೇಕೆಂಬುದನ್ನು ಸಮರ್ಥಿಸಿ ಬರೆಯಿರಿ.

______________________________

______________________________

______________________________

______________________________

______________________________

aglasem

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಕೆಎಸ್‌ಕ್ಯುಎಎಸಿ, ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SCHOOL EXAMINATION AND ASSESSMENT BOARD

KSQAAC, Malleshwaram, Bengaluru–560003.

## ಮೌಲ್ಯಾಂಕನ – ಮಾರ್ಚ್ 2023 – ಮಾದರಿ ಪ್ರಶ್ನೋತ್ತರ ಪತ್ರಿಕೆ

## Assessment - March 2023 Model Paper

---

**ತರಗತಿ : 8** **ವಿಷಯ : ಕನ್ನಡ ದ್ವಿತೀಯ ಭಾಷೆ** **ಅಂಕಗಳು : 40**
**ಸಮಯ : 2 ಗಂಟೆ**

---

**ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ**

ವಿದ್ಯಾರ್ಥಿಯ ಹೆಸರು : ____________________

ವಿದ್ಯಾರ್ಥಿಯ SATS ಸಂಖ್ಯೆ : ☐☐☐☐☐☐☐☐☐ ವಿದ್ಯಾರ್ಥಿಯ ಸಹಿ : ____________

**ಕೊಠಡಿ ಮೇಲ್ವಿಚಾರಕರು ಭರ್ತಿ ಮಾಡಬೇಕಾಗಿರುವ ಮಾಹಿತಿ**

ಶಾಲೆಯ ಡೈಸ್ ಕೋಡ್ : ☐☐☐☐☐☐☐☐☐☐☐

ಶಾಲೆಯ ಹೆಸರು : ____________________

ಕ್ಲಸ್ಟರ್ : ____________ ಬ್ಲಾಕ್ : ____________ ಜಿಲ್ಲೆ : ____________

ಶಾಲೆಯ ವಿಧ : ಸರ್ಕಾರಿ ☐ ಅನುದಾನಿತ ☐ ಅನುದಾನ ರಹಿತ ☐

(ಅನ್ವಯಿಸುವ ಮಾಹಿತಿಗೆ "✓" ಗುರುತು ಹಾಕಿರಿ)

ಕೊಠಡಿ ಮೇಲ್ವಿಚಾರಕರ ಸಹಿ : ____________

**ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ**

| ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು |
|---|---|---|---|---|---|
| 1 | | 11 | | 21 | |
| 2 | | 12 | | 22 | |
| 3 | | 13 | | 23 | |
| 4 | | 14 | | 24 | |
| 5 | | 15 | | 25 | |
| 6 | | 16 | | 26 | |
| 7 | | 17 | | 27 | |
| 8 | | 18 | | 28 | |
| **9** | | 19 | | – | |
| **10** | | 20 | | – | |
| ಒಟ್ಟು ಅಂಕಗಳು | | ಒಟ್ಟು ಅಂಕಗಳು | | ಒಟ್ಟು ಅಂಕಗಳು | |
| | | | | ಒಟ್ಟು ಗಳಿಸಿದ ಅಂಕ | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) ____________________

ಮೌಲ್ಯಮಾಪಕರ ಸಹಿ : ____________

**I. 1 ರಿಂದ 20 ರವರೆಗಿನ ಪ್ರಶ್ನೆಗಳಿಗೆ ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ನಿಗದಿಪಡಿಸಿರುವ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.** **(20 x 1 = 20)**

**1. ನಮ್ಮ ಪರಿಸರವು ಗಿಡ, ಮರ, ನದಿ, ಬೆಟ್ಟ, ಬಯಲುಗಳನ್ನು ಒಳಗೊಂಡಿದೆ ಎಂದು ಶಿಕ್ಷಕರು ತಿಳಿಸಿಕೊಟ್ಟರು. ಹಾಗಾದರೆ ಈ ವಾಕ್ಯದಲ್ಲಿ ಬಳಕೆಗೊಂಡಿರುವ ಗಿಡ, ಮರ, ನದಿ, ಬೆಟ್ಟ, ಬಯಲು, ಇವು :**

A. ಅಂಕಿತನಾಮ B. ರೂಢನಾಮ

C. ಅನ್ವರ್ಥನಾಮ D. ಸ್ಥಳನಾಮ

ಉತ್ತರ : ______

**2. "ತಾಯಂದಿರ ಎದೆಹಾಲು ಅಮೃತಕ್ಕೆ ಸಮಾನ" ಎಂದು ವೈದ್ಯರು ಹೇಳಿದರು. – ಇಲ್ಲಿ 'ತಾಯಂದಿರು' ಪದವು ಸೂಚಿಸುವ ಲಿಂಗ.**

A. ನಪುಂಸಕ ಲಿಂಗ B. ಪುಲ್ಲಿಂಗ

C. ಸ್ತ್ರೀಲಿಂಗ D. ಪುಂ ಸ್ತ್ರೀಲಿಂಗ

ಉತ್ತರ : ______

**3. ತಾಯಿಯು ಅಡುಗೆ ಮನೆಯಲ್ಲಿ ತನ್ನ ಕೆಲಸದಲ್ಲಿ ತೊಡಗಿರುವಾಗ <u>ಮಗು</u> ಆಡುತ್ತಾ ಬೀದಿಗೆ ಬಂದಿತು. – ಈ ವಾಕ್ಯದಲ್ಲಿ ಗೆರೆ ಎಳೆದ ಪದದ ಬಹುವಚನ.**

A. ಮಕ್ಕಳು B. ಮಗುಗಳು

C. ಹುಡುಗರು D. ಮಕ್ಕಳಂದಿರು

ಉತ್ತರ : ______

**4. ಆಕಾಶಕೆ ತುಡಿಯುವಾ ನೆಲದಾಳದ ಕನಸೇ ನೀಡಲೆಂದೆ ಫಲಿಸುವಾ ಋಷಿ ಸಮಾನ ಮನಸೇ; – ಪ್ರಸ್ತುತ ಪದ್ಯದಲ್ಲಿ ಬಳಕೆಗೊಂಡ ಲೇಖನ ಚಿಹ್ನೆ.**

A. ಭಾವಸೂಚಕ B. ವಾಕ್ಯವೇಷ್ಟನ

C. ಉದ್ಧರಣ D. ಅರ್ಧವಿರಾಮ

ಉತ್ತರ : ______

**5. ಪೊಲೀಸರು ಬಾಲಕನನ್ನು ಅರೆಸ್ಟು ಮಾಡಲು ಆಶ್ರಮಕ್ಕೆ ಬಂದರು. – ಈ ವಾಕ್ಯದಲ್ಲಿ ಚತುರ್ಥಿ ವಿಭಕ್ತಿ ಪ್ರತ್ಯಯದ ಪದ.**

A. ಪೊಲೀಸರು B. ಆಶ್ರಮಕ್ಕೆ

C. ಬಾಲಕನ D. ಬಂದರು.

ಉತ್ತರ : ______

aglasem

6. ಮಕ್ಕಳು ಆ ಕಡೆಗೆ ನೋಡುತ್ತಿದ್ದಂತೆಯೇ ಜಲಪಾತದಿಂದ ನೀರು ದಬದಬನೆ ಬೀಳಲು ಆರಂಭಿಸಿತು. – ಈ ವಾಕ್ಯದಲ್ಲಿ ಬಳಕೆಗೊಂಡ ಅನುಕರಣಾವ್ಯಯ ಪದ :

A. ಮಕ್ಕಳು B. ಜಲಪಾತ

C. ಆಕಡೆಗೆ D. ದಬದಬ

ಉತ್ತರ : ______

7. ಹೊತ್ತನು ಅರಿಯದ ದಿಕ್ಕನು ಕಾಣದ
ಸೀಳು ದಾರಿಯ ಪಯಣಿಗರು
ನೋವಿನ ಹಾಡಿನ ಕತ್ತಲ ನಾಡಿನ
ಬೆಳಕನು ಅರಸುವ ಹಕ್ಕಿಗಳು – ಈ ಪದ್ಯದಲ್ಲಿ ಬಳಕೆಗೊಂಡ 'ಹಕ್ಕಿ' ಪದದ ತತ್ಸಮ (ಸಂಸ್ಕೃತ) ರೂಪ :

A. ಕ್ಷೀರ B. ಪೃಥ್ವಿ

C. ಪಕ್ಕಿ D. ಪಕ್ಷಿ

ಉತ್ತರ : ______

8. ರೀಟಾ ಶಾಲೆಯಲ್ಲಿ ತುಂಬ ಕೀಟಲೆ ಮಾಡುತ್ತಾಳೆ. – ಈ ವಾಕ್ಯದಲ್ಲಿ ಬಳಕೆಗೊಂಡ ಕರ್ತೃ ಪದ :

A. ಮಾಡುತ್ತಾಳೆ B. ಕೀಟಲೆ

C. ಶಾಲೆಯಲ್ಲಿ D. ರೀಟಾ

ಉತ್ತರ : ______

9. ಮಧ್ಯಾಹ್ನದ ಹೊತ್ತು ಹೊರಳೋದು ನಿಶ್ಚಿತ; ಹಾಗೆಯೇ ಸಿರಿವಂತಿಕೆ ಸರಿದು ಬಡತನ ಬರುವುದು ಖಚಿತ ಎಂದು ಅಮ್ಮ ಬುದ್ಧಿಮಾತು ಹೇಳಿದಳು. – ಈ ಹೇಳಿಕೆಯಲ್ಲಿನ 'ಹೊರಳೋದು' ಪದದ ಗ್ರಾಂಥಿಕ ರೂಪ :

A. ಹೊಡೆಯುವುದು B. ಹೊರಳುವುದು

C. ಬೀಳುವುದು D. ತಿರುಗೋದು

ಉತ್ತರ : ______

10. ನಾಲ್ಕು ಸಾಲುಗಳನ್ನು ಒಳಗೊಂಡ ಪದ್ಯಕ್ಕೆ ಹೀಗೆನ್ನುತ್ತಾರೆ :

A. ಚೌಪದಿ B. ತ್ರಿಪದಿ

C. ದ್ವಿಪದಿ D. ಷಟ್ಪದಿ

ಉತ್ತರ : ______

**11.** **ಒಂದು ಕಾರ್ಯಕ್ರಮದ ನಿರೂಪಣೆಯ ಕೊನೆಯ ಹಂತ :**

A. ಪ್ರಾರ್ಥನೆ B. ಸ್ವಾಗತ

C. ವಂದನಾರ್ಪಣೆ D. ಭಾಷಣ

ಉತ್ತರ : ☐ ____________________

**12.** **ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು ಅದು ಒಳಗೊಂಡಿರುವ ಮೌಲ್ಯವನ್ನು ಗುರುತಿಸಿರಿ :**

**ರಾಮು ಹೆದ್ದಾರಿ ಬದಿಯ ಕ್ಯಾಂಟೀನಿಗೆ ಪ್ರತಿದಿನ ತಪ್ಪದೇ ಹಾಜರಾಗುತ್ತಿದ್ದ, ಆತನೊಂದಿಗೆ ಅಲ್ಲಿನ ಬೀದಿನಾಯಿಯೊಂದು ತುಂಬಾ ಅಕ್ಕರೆಯಿಂದ ಒಡನಾಡುತ್ತಿತ್ತು. ನಾಯಿಯು ರಾಮುವನ್ನು ಕಾಣುತ್ತಿದ್ದಂತೆಯೇ ಶರವೇಗದಲ್ಲಿ ಓಡಿಬಂದು ಪಾದವನ್ನು ನೆಕ್ಕಲು ಶುರು ಮಾಡುತ್ತಿತ್ತು. ಆತನು ಹಾಕುತ್ತಿದ್ದ ಬಿಸ್ಕೆಟ್ಟು–ಬ್ರೆಡ್ಡು ತಿಂದು ಸಂತೃಪ್ತಿಯಿಂದ ಬಾಲ ಅಲ್ಲಾಡಿಸುತ್ತ ಅವನ ಎದೆ ಮಟ್ಟಕ್ಕೆ ಜಿಗಿದು ಪ್ರೀತಿ ತೋರಿಸುತ್ತಿತ್ತು.**

A. ರಾಮುವಿನ ಮೋಡಿ ಮತ್ತು ನಾಯಿಯ ನಾಟಕ

B. ಕೇವಲ ರಾಮುವಿನ ತೋರಿಕೆಯ ಗುಣ

C. ನಾಯಿಯು ರಾಮುವನ್ನು ಮರುಳು ಮಾಡುವಿಕೆ

D. ರಾಮುವಿನ ಸಹಾನುಭೂತಿ ಮತ್ತು ನಾಯಿಯ ಕೃತಜ್ಞತಾ ಭಾವ

ಉತ್ತರ : ☐ ____________________

**13.** **ಕೆಳಗೆ ನೀಡಿರುವ ಭಾಗವನ್ನು ಓದಿಕೊಂಡು ನಿರ್ದಿಷ್ಟ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಬರೆಯಿರಿ :**

**ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ**
**ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ**
**ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ**
**ಇದೇ ಅಂತರಂತ ಶುದ್ಧಿ; ಇದೇ ಬಹಿರಂಗ ಶುದ್ಧಿ;**
**ಇದೇ ನಮ್ಮ ಕೂಡಲಸಂಗಮ ದೇವನೊಲಿಸುವ ಪರಿ.**

A. ಕೀರ್ತನೆ B. ವಚನ

C. ಕಂದಪದ್ಯ D. ಕಥನ ಕವನ

ಉತ್ತರ : ☐ ____________________

**14.** **ಕೊಟ್ಟಿರುವ ಚಿತ್ರವನ್ನು ಗಮನಿಸಿ, ಧಾರ್ಮಿಕ ಕೇಂದ್ರವನ್ನು ಗುರುತಿಸಿ ಬರೆಯಿರಿ :**



A. ಮಸೀದಿ B. ಸ್ತೂಪ

C. ಮಂದಿರ D. ಚರ್ಚು

ಉತ್ತರ : ☐ ____________________

**15. ನೀಡಿರುವ ಪದ್ಯಭಾಗವನ್ನು ಓದಿಕೊಂಡು ಅದಕ್ಕೆ ಸಂಬಂಧಿಸಿದ ಸರಿಯಾದ ಹೇಳಿಕೆಯನ್ನು ಗುರುತಿಸಿ ಬರೆಯಿರಿ.**

**ಮಳೆ ಬರಲಿ . . . . . . . . .**
**ಆದರೆ**
**ಹುಲ್ಲಿನ ಛಾವಣಿಗಳನ್ನೂ**
**ಮಣ್ಣಿನ ಗೋಡೆಗಳನ್ನೂ**
**ಕೆಡವಿ ಹಾಕದಿರಲಿ**

**ಹೇಳಿಕೆಗಳು :**

A. ಮಳೆ ಬಾರದಿರಲು ಮನೆ ಸುರಕ್ಷಿತವಾಗಿರುತ್ತದೆ

B. ಮಳೆಯಾಗಿ ಮನೆಗಳು ಕುಸಿದು ಬೀಳಲಿ

C. ಪ್ರಕೃತಿ ವಿಕೋಪಗಳು ಉಂಟಾಗಲಿ

D. ಮಳೆಯಾಗಲಿ ಆದರೆ ಜನರ ನೆಮ್ಮದಿಯನ್ನು ಹಾಳು ಮಾಡದಿರಲಿ

ಉತ್ತರ : [ ] ______________________________

**16. ಭೂಮಿಯಲ್ಲಿರುವ ಸಮಸ್ತ ಜೀವರಾಶಿಗಳಿಗೆ ಸೂರ್ಯನೇ ಆಧಾರ. – ಇಲ್ಲಿ ಬಳಕೆಯಾದ 'ಸೂರ್ಯ' ಪದದ ಪರ್ಯಾಯ ಪದ :**

A. ತಾರೆ B. ಬಾನು

C. ದಿನಕರ D. ಮೋಡ

ಉತ್ತರ : [ ] ______________________________

**17. ಮೊದಲೆಲ್ಲಾ, ಪಟೇಲರೇ ಊರಲ್ಲಿ ನ್ಯಾಯ ತೀರ್ಮಾನ ಮಾಡುತ್ತಿದ್ದರು. – ಇಲ್ಲಿರುವ 'ಊರಲ್ಲಿ' ಪದವನ್ನು ಬಿಡಿಸಿ ಬರೆದಾಗ,**

A. ಊರು + ಅಲ್ಲಿ

B. ಊರಿನ + ಅಲ್ಲಿ

C. ಊರು + ನಲ್ಲಿ

D. ಊ + ರಲ್ಲಿ

ಉತ್ತರ : [ ] ______________________________

18. **ಕುರಿಯನು ಕಾಯ್ದು ದನಗಳ ಮೇಯಿಸಿ**
**ಹಾಲನು ಕುಡಿಯದೆ ಹೋದವರು**
**ಓದುವ ಬರೆಯುವ ಭಾಗ್ಯವು ಸಿಗದೆ**
**ಗಿಡಗಳ ಜೊತೆಯಲಿ ಬೆಳೆದವರು – ಈ ಕವಿತೆಯಲ್ಲಿ ಅಡಗಿರುವ ಭಾವ :**

A. ನಾವು ಶಿಕ್ಷಣವನ್ನು ಕಲಿತ ಶ್ರೀಮಂತ ಜನರು

B. ನಾವು ಶಿಕ್ಷಣವನ್ನು ಪಡೆದ ಶೋಷಿತ ಜನರು

C. ನಾವು ಶಿಕ್ಷಣದಿಂದ ವಂಚಿತರಾದ ಶೋಷಿತ ಜನರು

D. ಮೇಲಿನ ಎಲ್ಲವೂ

ಉತ್ತರ : ______

19. **ಚಿತ್ರ ನೋಡಿ ಸರಿಯಾದ ಶೀರ್ಷಿಕೆ ಗುರುತಿಸಿ :**



A. ಕಸವನ್ನು ಎಲ್ಲೆಂದರಲ್ಲಿ ಬಿಸಾಡು

B. ಕಸವನ್ನು ಸೂಕ್ತ ಸ್ಥಳದಲ್ಲಿ ಹಾಕಿ, ಜೀವ ರಕ್ಷಿಸಿ

C. ಹಸುವಿಗೆ ಪ್ಲಾಸ್ಟಿಕ್ ತಿನ್ನಿಸಬೇಕು

D. ಸ್ವಚ್ಛ ಪರಿಸರಕ್ಕಾಗಿ ಕಸವನ್ನು ಎಲ್ಲೆಂದರಲ್ಲಿ ಹರಡಿರಿ.

ಉತ್ತರ : ______

20. **ತಾನಸೇನನು ಆಡನ್ನು ಹಾಡಿದನು. – ಇಲ್ಲಿನ ಅರ್ಥ ವ್ಯತ್ಯಾಸವನ್ನು ಸರಿಪಡಿಸಿ ಬರೆದಾಗ,**

A. ತಾನಸೇನನು ಹಾಡನ್ನು ಆಡಿದನು

B. ತಾನಸೇನನು ಆಡನ್ನು ಆಡಿದನು

C. ತಾನಸೇನನು ಆಡನ್ನು ಹಾಡುವನು

D. ತಾನಸೇನನು ಹಾಡನ್ನು ಹಾಡಿದನು.

ಉತ್ತರ : ______

**II.** 21 ರಿಂದ 28 ರವರೆಗಿನ ಪ್ರಶ್ನೆಗಳಿಗೆ ನಿಗದಿಪಡಿಸಿರುವ ಸ್ಥಳದಲ್ಲಿ ಉತ್ತರಿಸುವುದು.

**21.** ಇಲ್ಲಿ ನೀಡಲಾದ ಜಾಹೀರಾತನ್ನು ಓದಿ, ಅದರಲ್ಲಿ ಚರ್ಚಿತವಾಗಿರುವ ವಿಷಯಗಳನ್ನು ನಾಲ್ಕು ಸರಳ ವಾಕ್ಯಗಳಲ್ಲಿ ಬರೆಯಿರಿ. 2 ಅಂಕ




**22.** ನೀಡಿರುವ ಚಿತ್ರಗಳನ್ನು ಗಮನಿಸಿ, ಗಾದೆ ಮಾತುಗಳನ್ನು ಬರೆಯಿರಿ. 2 ಅಂಕ

 + 

 + 

23. ನಿಮಗೆ ತಿಳಿದಿರುವ ನಾಲ್ಕು ಜನ ಕವಿ/ಲೇಖಕರ ಹೆಸರುಗಳನ್ನು ಬರೆಯಿರಿ. 2 ಅಂಕ

24. ಕೊಟ್ಟಿರುವ ಚಿತ್ರಗಳನ್ನು ನೋಡಿ ನುಡಿಗಟ್ಟುಗಳನ್ನು ಬರೆಯಿರಿ. 2 ಅಂಕ



25. ಕೊಟ್ಟಿರುವ ಸುಳಿವು ಪದಗಳನ್ನು ಆಧರಿಸಿ ನಾಲ್ಕೈದು ಸರಳ ವಾಕ್ಯಗಳಲ್ಲಿ ಒಂದು ಚಿಕ್ಕ ಕಥೆಯನ್ನು ರಚಿಸಿರಿ. 2 ಅಂಕ

ಸುಳಿವುಗಳು : ಮಗು, ತಂದೆ, ತಾಯಿ, ಬಡತನ, ಅನಕ್ಷರತೆ, ಬಾಲಕಾರ್ಮಿಕ, ಶಾಲೆ, ಶಿಕ್ಷಕರು, ಉಚಿತ ಮತ್ತು ಕಡ್ಡಾಯ ಶಿಕ್ಷಣ.

26. ಕೊಟ್ಟಿರುವ ಚಿತ್ರವನ್ನು ಅವಲೋಕಿಸಿ, ಸದರಿ ಸನ್ನಿವೇಶಕ್ಕೆ ಸೂಕ್ತವೆನಿಸುವ ನಾಲ್ಕು ಸರಳ ವಾಕ್ಯಗಳನ್ನು ಬರೆಯಿರಿ. 3 ಅಂಕ



27. ನಯನ ಎಂಬ ವಿದ್ಯಾರ್ಥಿನಿಯು ತನ್ನ ವ್ಯಾಸಂಗ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ಶಾಲೆಯ ಮುಖ್ಯೋಪಾಧ್ಯಯರಿಗೆ ಪತ್ರ ಬರೆದಿದ್ದಾಳೆ. ಅದರಲ್ಲಿ ಕೆಲವು ಅಂಶಗಳು ಬಿಟ್ಟು ಹೋಗಿವೆ. ಅವುಗಳನ್ನು ಭರ್ತಿ ಮಾಡಿರಿ. 3 ಅಂಕ

ಇಂದ ದಿನಾಂಕ : 12–01–2023

ನಯನ

____________

____________

____________

ಗೆ,

____________

____________

____________

ಮಾನ್ಯರೇ,

ವಿಷಯ : ವ್ಯಾಸಂಗ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

________________________________________________

________________________________________________

________________________________________________

________________________________________________

ವಂದನೆಗಳೊಂದಿಗೆ

ಇಂತಿ,

ತಮ್ಮ ವಿಧೇಯ ವಿದ್ಯಾರ್ಥಿನಿ

aglasem

28. ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು, ಕೆಳಗಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ : 4 ಅಂಕ

ಮಲೆನಾಡಿನಲ್ಲಿ ಬಹಳ ಮದುವೆಗಳ ಮಂಟಪಗಳಿಗೆ ಅಂಗಳವೇ ಆಶ್ರಯದಾತ, ಮದುವೆಯ ಅಡುಗೆಗೆ ತರಕಾರಿ ಕೊಚ್ಚಲು, ಊಟದ ತಯಾರಿ ಮಾಡಲು ಕೊನೆಗೆ ಅಡುಗೆ ಬೇಯಿಸಲು ಅಂಗಳ ಆಧಾರ, ಗೃಹಪ್ರವೇಶ ಎಂಬ ಗಂಡಿನ ಮನೆಯ ಸಂಭ್ರಮಕ್ಕೆ ಅಂಗಳವೇ ಸಾಕ್ಷಿ. ಹೆಣ್ಣಿನ ಹೊಸ ಬದುಕು ಆರಂಭವಾಗುವುದೇ ಇಲ್ಲಿ. ಅಡಿಕೆ ಕೊಯ್ಲಿನ ಸಮಯದಲ್ಲಿ ಹಸಿರು ಹಳದಿ ಅಡಿಕೆಗಳ ರಾಶಿ ರಾಶಿ ಗೊಂಚಲುಗಳು ಅಂಗಳವನ್ನು ತುಂಬಿಕೊಳ್ಳುವ ಪರಿಯೇ ಚಂದ ಊರ ಮಂದಿಯೆಲ್ಲ ಒಂದಾಗಿ, ಹಗಲೆನ್ನದೆ, ರಾತ್ರಿಯೆನ್ನದೆ ಅಡಿಕೆಯನ್ನು ಸುಲಿಯುವ ಸಂಭ್ರಮಕ್ಕೆ ಸಾಟಿಯೇ ಇಲ್ಲ ! ವಿದೇಶೀ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುವ ವಾರಾಂತ್ಯದಲ್ಲಿ ಊರಿಗೆ ಬಂದ ಮಗನೂ, ಆಳುಮಗನೂ ಒಟ್ಟಿಗೇ ಅಡಿಕೆ ಸುಲಿಯುತ್ತಾರೆ.

ಪ್ರಶ್ನೆಗಳು :

1. ಮಲೆನಾಡಿನಲ್ಲಿ ನಡೆಯುವ ಮದುವೆಗಳಿಗೂ ಅಂಗಳಕ್ಕೂ ಇರುವ ಸಂಬಂಧದ ವೈಶಿಷ್ಟ್ಯವೇನು?

2. ಅಡಿಕೆ ಸುಲಿಯುವ ಸಮಯದಲ್ಲಿ ಅಂಗಳದ ಸಂಭ್ರಮ ಹೇಗಿರುತ್ತದೆ?

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಕೆಎಸ್‌ಕ್ಯುಎಎಸಿ, ಮಲ್ಲೇಶ್ವರಂ, ಬೆಂಗಳೂರು–560003.

## KARNATAKA SCHOOL EXAMINATION AND ASSESSMENT BOARD

KSQAAC, Malleshwaram, Bengaluru–560003.

## ಮೌಲ್ಯಾಂಕನ – ಮಾರ್ಚ್ 2023 – ಮಾದರಿ ಪ್ರಶ್ನೋತ್ತರ ಪತ್ರಿಕೆ

## Assessment - March 2023 Model Paper

**ತರಗತಿ : 8** | ವಿಷಯ : ತೃತೀಯ ಭಾಷೆ ಕನ್ನಡ | ಅಂಕಗಳು : 40 | ಸಮಯ : 2 ಗಂಟೆ

### ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ

ವಿದ್ಯಾರ್ಥಿಯ ಹೆಸರು : ____________________

ವಿದ್ಯಾರ್ಥಿಯ SATS ಸಂಖ್ಯೆ : ☐☐☐☐☐☐☐☐☐ ವಿದ್ಯಾರ್ಥಿಯ ಸಹಿ : ____________

### ಕೊಠಡಿ ಮೇಲ್ವಿಚಾರಕರು ಭರ್ತಿ ಮಾಡಬೇಕಾಗಿರುವ ಮಾಹಿತಿ

ಶಾಲೆಯ ಡೈಸ್ ಕೋಡ್ : ☐☐☐☐☐☐☐☐☐☐☐

ಶಾಲೆಯ ಹೆಸರು : ____________________

ಕ್ಲಸ್ಟರ್ : ____________ ಬ್ಲಾಕ್ : ____________ ಜಿಲ್ಲೆ : ____________

ಶಾಲೆಯ ವಿಧ : ಸರ್ಕಾರಿ ☐ ಅನುದಾನಿತ ☐ ಅನುದಾನ ರಹಿತ ☐

(ಅನ್ವಯಿಸುವ ಮಾಹಿತಿಗೆ "✓" ಗುರುತು ಹಾಕಿರಿ)

ಕೊಠಡಿ ಮೇಲ್ವಿಚಾರಕರ ಸಹಿ : ____________

### ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ

| ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು |
|---|---|---|---|---|---|
| 1 | | 11 | | 21 | |
| 2 | | 12 | | 22 | |
| 3 | | 13 | | 23 | |
| 4 | | 14 | | 24 | |
| 5 | | 15 | | 25 | |
| 6 | | 16 | | 26 | |
| 7 | | 17 | | 27 | |
| 8 | | 18 | | 28 | |
| **9** | | 19 | | – | |
| **10** | | 20 | | – | |
| ಒಟ್ಟು ಅಂಕಗಳು | | ಒಟ್ಟು ಅಂಕಗಳು | | ಒಟ್ಟು ಅಂಕಗಳು | |
| | | | | ಒಟ್ಟು ಗಳಿಸಿದ ಅಂಕ | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) ____________________

ಮೌಲ್ಯಮಾಪಕರ ಸಹಿ : ____________

**I. 1 ರಿಂದ 20 ರವರೆಗಿನ ಪ್ರಶ್ನೆಗಳಿಗೆ ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ನಿಗದಿಪಡಿಸಿರುವ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. 20 x 1 = 20**

1. **'ನದಿಗಳು ಸೊಕ್ಕಿ ಕೆರೆಗಳು ಉಕ್ಕಿ**
**ಕಂಗಾಲಾದವು ಚಿಲಿಪಿಲಿ ಹಕ್ಕಿ'.**

**ಕಂಗಾಲಾದವು ಪದದ ಅರ್ಥ**

A) ಕಣ್ಣು ಕಾಲಾಗು  B) ಎಲ್ಲವನ್ನೂ ಮಾಡು

C) ಕುಣಿದಾಡು  D) ಏನೂ ತೋಚದಂತಾಗು

ಉತ್ತರ : ☐ ________________

2. **ನಮ್ಮ ಸಂಸ್ಕೃತಿಯಲ್ಲಿ ಸ್ತ್ರೀಯರನ್ನು ಕುರಿತಂತೆ ಗೌರವದ ಭಾವನೆ ಇದೆ. ಅದರಲ್ಲೂ ತಾಯಿಯನ್ನು ಕುರಿತಂತೆ ಅತಿ ಹೆಚ್ಚಿನ ಪ್ರೀತಿ ಆದರಗಳಿವೆ.**

**ಸ್ತ್ರೀ ಸಂಕುಲದಲ್ಲಿ ಅತಿ ಹೆಚ್ಚಿನ ಪ್ರೀತಿ ಆದರಗಳಿಗೆ ಪಾತ್ರರಾದ ಸ್ತ್ರೀ ಎಂದರೆ**

A) ಸೊಸೆ  B) ಮಗಳು

C) ಸೋದರಿ  D) ತಾಯಿ

ಉತ್ತರ : ☐ ________________

3. **ಹೆಣ್ಣು-ಗಂಡೆಂಬ ತಾರತಮ್ಯ ಮರೆತು ಸೃಷ್ಟಿಯ ಎರಡು ಕಣ್ಣುಗಳೆಂಬಂತೆ ನಾವು ಬಾಳುವೆವು.**
**ಈ ಸಾಲು ಸಾರುವ ಸಂದೇಶ**

A) ಲಿಂಗಭೇದ  B) ಸಮಾನತೆ

C) ಗಂಡು ಮೇಲು  D) ಹೆಣ್ಣು ಮೇಲು

ಉತ್ತರ : ☐ ____________________________

4. **ಚಿತ್ರ ಗಮನಿಸಿ ಅದು ಸೂಚಿಸುವ ಹಬ್ಬದ ಆಚರಣೆ**



A) ರಂಜಾನ್

B) ದೀಪಾವಳಿ

C) ಕ್ರಿಸ್‌ಮಸ್

D) ಹೋಳಿ

ಉತ್ತರ : ☐ ________________

5. **ಹಂಪೆಯಲ್ಲಿ ವಿರೂಪಾಕ್ಷನ ದರುಶನಕ್ಕೆ ಹೊರಡುವ ಮುನ್ನ ಸ್ನಾನ, ಆಚಮನಗಳನ್ನು ಮಾಡಿಕೊಂಡು ದೇವರ ಪಾರಾಯಣ ಮಾಡುತ್ತಾ ಸಾಗಿದರೆ ಅದೊಂದು ಅದ್ಭುತ, ರೋಮಾಂಚಕ ಅನುಭವ.**

**ಇಲ್ಲಿ ಬಂದಿರುವ ಆಚರಣೆಗಳೆಂದರೆ**

A) ಸ್ನಾನ, ಆಚಮನ, ಪಾರಾಯಣ

B) ಹೊರಡುವುದು, ಬರುವುದು

C) ಅದ್ಭುತ, ರೋಮಾಂಚಕ

D) ಹಂಪೆ, ವಿರೂಪಾಕ್ಷ

ಉತ್ತರ : ☐ ____________________

6. **ಕೈ ಬರಹದಲ್ಲಿರುವ ಸವಿಯಾದ ನೆನಪು**



ಪ್ರತಿಯೊಬ್ಬರೂ ಬೆಳೆಯುತ್ತಾ ಹೋದಂತೆ ತಮ್ಮ ತಮ್ಮ ಬಾಲ್ಯಜೀವನವನ್ನು ನೆನಪಿಸಿಕೊಳ್ಳಲು ಇಷ್ಟಪಡುತ್ತಾರೆ. ಅದು ತುಂಬಾ ಸವಿಯಾದ ನೆನಪಾಗಿರುತ್ತದೆ.

A) ಮುಪ್ಪಿನ ಜೀವನ

B) ಸಿಹಿಯಾದ ನೆನಪು

C) ಬಾಲ್ಯ ಜೀವನ

D) ಪ್ರತಿಯೊಬ್ಬರ ಬೆಳವಣಿಗೆ

ಉತ್ತರ : ☐ ____________________

aglasem

7. **ಅತೀ ಚೀಪ್ ಬೆಲೆಯಲ್ಲಿ ಕೈಗೆಟುಕುವ ಬಟ್ಟೆಯ ತುಂಡೇ 'ಕರ್ಚೀಫ್' ಎಂಬ ದೊಡ್ಡ ಹೆಸರು ಪಡೆದಿದೆ. "ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು" ಎನ್ನುವಂತೆ ಬಹು ಉಪಯೋಗಿ ಕರ್ಚೀಫಿನ ಮಹಿಮೆ ಅಪಾರ.**

**ಅತೀ ಕಡಿಮೆ ಬೆಲೆಯಲ್ಲಿ ಕೈಗೆಟುಕುವ ಬಟ್ಟೆಯ ತುಂಡು.**

A) ಪಂಚೆ

B) ಶಲ್ಯ

C) ಟವೆಲ್

D) ಕರ್ಚೀಫ್

ಉತ್ತರ : ☐ ____________________

**8.** **ನಿನ್ನ ಮಿತ್ರನಿಗೆ ಪತ್ರ ಬರೆಯುವಾಗ ನೀನು ಬಳಸುವ ಸಂಬೋಧನೆ**

A) ಪ್ರೀತಿಯ ಗೆಳೆಯ  B) ಪೂಜ್ಯ ಗೆಳೆಯ

C) ತೀರ್ಥರೂಪು ಗೆಳೆಯ  D) ಮಾನ್ಯ ಗೆಳೆಯ

ಉತ್ತರ : ☐ ____________________

**9.** **ಜವಾಹರಲಾಲ್ ನೆಹರು ಅವರು ಇಂದಿರಾ ಗಾಂಧಿಗೆ ಬರೆದ ಪತ್ರ ಈ ಮಾದರಿಯ ಪತ್ರವಾಗಿದೆ.**

A) ರಜಾ ಅರ್ಜಿ  B) ವೈಯಕ್ತಿಕ ಪತ್ರ

C) ವ್ಯವಹಾರ ಪತ್ರ  D) ಗುಪ್ತ ಪತ್ರ

ಉತ್ತರ : ☐ ____________________

**10.** **"ಗಿಡ–ಮರಗಳಂತೆ ಪರರಿಗೆ ಉಪಕಾರಿಗಳಾಗಿ ಬೆಳೆದರೆ ಮನುಷ್ಯನ ಬದುಕು ಸಾರ್ಥಕವಾಗುತ್ತದೆ". ಗಿಡ–ಮರಗಳಿಂದ ನಾವು ಅರಿಯಬಹುದಾದ ಮೌಲ್ಯವೆಂದರೆ.**

A) ಪರೋಪಕಾರ  B) ದ್ವೇಷ

C) ಅಸಮಾನತೆ  D) ಬುದ್ಧಿವಂತಿಕೆ

ಉತ್ತರ : ☐ ____________________

**11.** **"ದುಮ್ಮಳ್ಳಿ ಗ್ರಾಮದ ಶಿವಮ್ಮ ಎಂಬ ಹೆಂಗಸು ಬೆಳೆಸಿರುವ ತೋಟವನ್ನು ನೋಡಲು ನಾವೆಲ್ಲರೂ ಹೋಗಿದ್ದೆವು".**

**ಈ ಸಾಲಿನಲ್ಲಿರುವ 'ತೋಟವನ್ನು' ಪದವನ್ನು ಬಿಡಿಸಿ ಬರೆದಾಗ.**

A) ತೋಟದ + ಅನ್ನು  B) ತೋಟ + ವನ್ನು

C) ತೋಟವ + ನ್ನು  D) ತೋಟ + ಅನ್ನು

ಉತ್ತರ : ☐ ____________________

**12.** **"ನಾ ಮೇಲಿನವನು ಬಲು ದೊಡ್ಡವನು**
**ಎಂದು ಮೆರೆದಾಡಬೇಡ ಗೆಳೆಯ"**

**ಈ ಸಾಲುಗಳು ಗೆಳೆಯನಿಗೆ ನೀಡುತ್ತಿರುವ ಸೂಚನೆಯೆಂದರೆ**

A) ಅಹಂಕಾರವನ್ನು ತೊರೆದು ಬದುಕು  B) ದೊಡ್ಡವನಂತೆ ಬದುಕು

C) ಮೇಲಾಗಿ ಬದುಕು  D) ಮೇಲು–ಕೀಳೆಂದು ಭೇದ–ಭಾವ ಮಾಡುತ್ತಾ ಬದುಕು

ಉತ್ತರ : ☐ ____________________

aglasem

13. ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ನಾವು ವಿಶೇಷವಾಗಿ ಇವರಿಗೆ ಗೌರವ ಸಲ್ಲಿಸುತ್ತೇವೆ.

A) ಮಕ್ಕಳು　　B) ಸಾಧನೆ ಮಾಡಿದ ಮಹಿಳೆಯರು

C) ಗುರುಗಳು　　D) ಪೋಷಕರು

ಉತ್ತರ : ☐ ________________

14. ಜನಪದರು ಮಣ್ಣಿನ ಮಕ್ಕಳು. ಭೂಮಿಯನ್ನು ತಾಯಿ ಎಂದು ಭಾವಿಸಿದವರು.
ತಮ್ಮ ತುತ್ತಿನ ಚೀಲ ತುಂಬಿಸಿಕೊಳ್ಳಲು ಹೊಲಗದ್ದೆಗಳಲ್ಲಿ ಕಷ್ಟಪಟ್ಟು ದುಡಿಯುವವರು.
ಇದಕ್ಕೆ ಸರಿಹೊಂದುವ ಗಾದೆ

A) ಮಣ್ಣಿನ ಬೆಲೆ ಮಣ್ಣಿನಿಂದಲೇ　　B) ಕಾಸಿದ್ದರೇ ಕೈಲಾಸ

C) ಕೈ ಕೆಸರಾದರೆ ಬಾಯಿ ಮೊಸರು　　D) ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು

ಉತ್ತರ : ☐ ________________

15. ಅಕ್ಕಿ ಹಕ್ಕಿಯನ್ನು ತಿಂದಿತು, ಎಚ್ಚರ ಎಂದು ಗೋಪಿಗೆ ಅಮ್ಮ ಅಕ್ಕಿಯನ್ನು ಕಾಯುವ ಕೆಲಸ ವಹಿಸಿದರು.
ಇಲ್ಲಿ ಸರಿ ರೂಪದ ವಾಕ್ಯ ಇದಾಗಿದೆ.

A) ಅಕ್ಕಿ ಅಕ್ಕಿಯನ್ನು ತಿಂದಿತು.　　B) ಹಕ್ಕಿ ಅಕ್ಕಿಯನ್ನು ತಿಂದಿತು.

C) ಹಕ್ಕಿ ಹಕ್ಕಿಯನ್ನು ತಿಂದಿತು.　　D) ಅಕ್ಕಿ ಹಕ್ಕಿ ತಿಂದಿತು.

ಉತ್ತರ : ☐ ________________

16. "“ಮರಣದ ಒಗಟ ಬಿಚ್ಚಿ ಹೇಳುವೆಯ ನೀನು.
ಲೋಕದೊಳಿತಿಗೆ ನಿನ್ನ ಕಾಣ್ಕೆ ಏನು?”
ಮರಣ ಪದದ ವಿರುದ್ಧಾರ್ಥಕ ಪದ ಇದಾಗಿದೆ.

A) ಜನನ　　B) ಅಮರಣ

C) ಅವಸಾನ　　D) ಜೀವನ

ಉತ್ತರ : ☐ ________________

17. **“ಭೂತಾಯ ಬಂಟ ಈ ನೇಗಿಲ ನಂಟ**
**ಇವನಿಂದ್ಲೆ ಅಳಿಯೋದು ಹಸಿವಿನಾ ಸಂಕಟ”.**
**ಈ ಸಾಲಿನಲ್ಲಿರುವ ಪ್ರಾಸ ಪದಗಳು**

A) ಭೂತಾಯ, ನೇಗಿಲ
B) ಇವನಿಂದ್ಲೆ, ಹಸಿವಿನಾ
C) ಬಂಟ, ನಂಟ, ಸಂಕಟ
D) ಈ, ನೇಗಿಲ

ಉತ್ತರ : ☐ ______________

18. **ನನ್ನ ದಿನಚರಿಯನ್ನು ಬರೆಯುವೆನು.**
**ಈ ವಾಕ್ಯವು ಸೂಚಿಸುತ್ತಿರುವ ಕಾಲ**

A) ಭವಿಷ್ಯತ್‌ಕಾಲ
B) ಭೂತಕಾಲ
C) ವರ್ತಮಾನಕಾಲ
D) ಗತಕಾಲ

ಉತ್ತರ : ☐ ______________

19. **ನಿನ್ಗೆ ಜೋಡಿ ಹಣ್ಕಾಯಿ ಒಡಿಸುವೆನು.**
**ಈ ಸಾಲಿನಲ್ಲಿರುವ ಹಣ್ಕಾಯಿ ಪದದ ಗ್ರಾಂಥಿಕ ರೂಪ**

A) ಹಣ್ಣು ಹಂಪಲು
B) ಹಣ್ಣು ಕಾಯಿ
C) ಹಣ್ಣು ಗಿಣ್ಣು
D) ಹಣ್ಣು ಪೀಚು

ಉತ್ತರ : ☐ ______________

20. **‘ಬೇಲೂರು ಶಿಲ್ಪಕಲೆಗಳ ನಾಡು’ ಎಂದು ಸುಪ್ರಸಿದ್ಧವಾಗಿದೆ.**
**ಬೇಲೂರು ಈ ನಾಮಪದದ ರೂಪವಾಗಿದೆ.**

A) ರೂಢ ನಾಮ
B) ಅನ್ವರ್ಥ ನಾಮ
C) ಅಂಕಿತ ನಾಮ
D) ಗುಣ ನಾಮ

ಉತ್ತರ : ☐ ______________

**II.** 21 ರಿಂದ 28 ರವರೆಗಿನ ಪ್ರಶ್ನೆಗಳಿಗೆ ನಿಗದಿಪಡಿಸಿರುವ ಸ್ಥಳದಲ್ಲಿ ಉತ್ತರಿಸುವುದು.

**21.** ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಕಡಿಮೆ ಮಾಡಿ ಹೆಚ್ಚು ನೈಸರ್ಗಿಕ ಗೊಬ್ಬರವನ್ನು ಉತ್ಪಾದಿಸಿ ಕೃಷಿಗೆ ಬಳಸುವುದರಿಂದ ಆರೋಗ್ಯಕರವಾದ ಆಹಾರವನ್ನು ಬೆಳೆಯಬಹುದು. ಹಾಗಾದರೆ ರಾಸಾಯನಿಕ ಗೊಬ್ಬರಗಳ ಬಳಕೆ ಸರಿಯೇ ?

ಆಲೋಚಿಸಿ 2–3 ಸಾಲುಗಳಲ್ಲಿ ಬರೆಯಿರಿ. **2** ಅಂಕ

______________________________

______________________________

______________________________

______________________________

**22.** "ತೊಟ್ಟಿಲು ಹೊತ್ಕೊಂಡು ತೌರ ಬಣ್ಣ ಉಟ್ಕೊಂಡು ಅಪ್ಪ ಕೊಟ್ಟೆಮ್ಮೆ ಹೊಡ್ಕೊಂಡು। ತಂಗ್ಯಮ್ಮ ತಿಟ ಹತ್ತಿ ತಿರುಗಿ ನೋಡ್ಯಾಳ."

ಈ ಸಾಲುಗಳಲ್ಲಿರುವ ಭಾವವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. **2** ಅಂಕ

______________________________

______________________________

______________________________

______________________________

**23.** ಈ ಸಲದ ಬೇಸಿಗೆ ರಜೆಯಲ್ಲಿ ಯಾವ ಸ್ಥಳಕ್ಕೆ ಹೋಗಲು ಇಷ್ಟಪಡುತ್ತೀರಿ. ಏಕೆ?

ಮೂರು–ನಾಲ್ಕು ಸಾಲುಗಳಲ್ಲಿ ಬರೆಯಿರಿ. **2** ಅಂಕ

______________________________

______________________________

______________________________

______________________________

aglasem

24. ನದಿಯ ನೀರು ಜುಳಜುಳನೇ ಹರಿಯುತ್ತಿತ್ತು. ಪುಟ್ಟಿಯು ಹರಿಯುವ ನೀರನ್ನು ಕಂಡು ಆನಂದದಿಂದ ಥಕಥಕನೆ ಕುಣಿದಾಡಿದಳು. ಪುಟ್ಟಿಯೊಡನೆ ನೀರಿನಲ್ಲಿ ಆಟವಾಡಲು ಗೋಪಿಯು ಗುಡುಗುಡು ಎಂದು ಓಡಿ ಬಂದನು.

ಇಲ್ಲಿರುವ ಅನುಕರಣಾವ್ಯಯಗಳನ್ನು ಗುರುತಿಸಿ ಬರೆಯಿರಿ. **2 ಅಂಕ**

25. ಉಳುವೋನೆ ಲೋಕಕ್ಕೆ ಬೇಕಾದ ಗೆಳೆಯ
ಹಳ್ಳಿಗೂ, ದಿಲ್ಲಿಗೂ ಕೊಡ್ತಾನೆ ಬೆಳೆಯ
ಭೂತಾಯ ಬಂಟ ಈ ನೇಗಿಲ ನಂಟ
ಇವನಿಂದ್ಲೆ ಅಳಿಯೋದು ಹಸಿವಿನಾ ಸಂಕಟ

ಈ ಕವನದಲ್ಲಿ ನಿಮಗೆ ಮೆಚ್ಚುಗೆಯಾದ ಅಂಶವನ್ನು ಕುರಿತು 2 ಸಾಲಿನಲ್ಲಿ ಬರೆಯಿರಿ. **2 ಅಂಕ**

26. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು'

ಈ ಗಾದೆಯನ್ನು ವಿಸ್ತರಿಸಿ ಮೂರು ಸಾಲುಗಳಲ್ಲಿ ಬರೆಯಿರಿ. **3 ಅಂಕ**



aglasem

27. 'ವಿಸ್ಮಯ' ಎಂಬ ವಿದ್ಯಾರ್ಥಿನಿಗೆ ಜ್ವರ ಬಂದಿರುವುದರಿಂದ ಮೂರು ದಿನಗಳ ರಜೆ ಕೋರಿ ಮುಖ್ಯ ಶಿಕ್ಷಕರಿಗೆ ಪತ್ರ ಬರೆದಿದ್ದಾಳೆ.

ಪತ್ರದಲ್ಲಿ ಬಿಟ್ಟು ಹೋಗಿರುವ ಅಂಶಗಳನ್ನು ಪೂರ್ಣಗೊಳಿಸಿ. **3 ಅಂಕ**

ಇಂದ,

ವಿಸ್ಮಯ

8ನೇ ತರಗತಿ

ಇವರಿಗೆ,

____________________

____________________

____________________

____________________

ಮಾನ್ಯರೆ,

ವಿಷಯ : ________________________________________

ಈ ಮೇಲ್ಕಂಡ ________________________________________

________________________________________________

________________________________________________

________________________________________________

________________________________________________

ವಂದನೆಗಳೊಂದಿಗೆ,

ಸ್ಥಳ : ____________________

ದಿನಾಂಕ : __________________

ಇಂತಿ

ತಮ್ಮ ವಿಧೇಯ ವಿದ್ಯಾರ್ಥಿನಿ

ವಿಸ್ಮಯ

aglasem

28. ಸರಣಿ ಚಿತ್ರ ಗಮನಿಸಿ ಕನಿಷ್ಟ ನಾಲ್ಕು ಸಾಲುಗಳಲ್ಲಿ ಕಥೆ ರಚಿಸಿ. ಕಥೆಗೊಂದು ಶೀರ್ಷಿಕೆ ನೀಡಿ.



aglasem